**<u>IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ</u>**

**OS No.849/2013**
**PW.2**

**<u>ದಿನಾಂಕಃ 11-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ ವಾದಿಪರ ಶ್ರೀಃ GRS ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇವೆ. ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ. ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಶ್ರೀಕಾಂತ ಅಂಬೋಲಕರ ಮತ್ತು ಯಲ್ಲಪ್ಪ ದಾಖಲು ಎಲೆಬೈಲಕರವರ ಮಧ್ಯ ಕ್ರಯದ ಕರಾರು ಒಪ್ಪಂದ ಆಗಿದ್ದು ಸದರಿ ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ, ಅದೇ ರೀತಿ ನನ್ನ ಸಮಕ್ಷಮದಲ್ಲಿ ಯಲ್ಲಪ್ಪ ದಾಖಲು ಎಲೆಬೈಲಕರವರ ಸಹಿ ಮಾಡಿದ್ದು ವಿಠಲ ದಾಖಲು ಎಲೆಬೈಲಕರು ಹೆಬ್ಬಟಿನ ಸಹಿ ಮಾಡಿರುತ್ತಾರೆ. ಸದರಿ ಕ್ರಯದ ಕರಾರು ಪತ್ರವನ್ನು ಈಗಾಗಲೆ ನಿಪಿ.7 ಎಂದು ಗುರುತಿಸಲಾಗಿದ್ದು ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ. 7ಸಿ ಎಂದು ಗುರುತಿಲಸಾಯಿತು. ಸದರಿ ದಾಖಲೆಗೆ ನಾಮದೇವ ಪಾಟೀಲ, ರವಳು ಕಾಕತಕರ ಮತ್ತು ಎಂ. ಬಿ.ತಿಗಡೊಳ್ಳಿ ರವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಸಹಿ ಮಾಡಿದ ಎಂ ಬಿ ತಿಗಡೊಳ್ಳಿರವರು ಈಗ ಮೃತಪಟ್ಟಿರುತ್ತಾರೆ. ಸದರಿಯವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ. 7ಡಿ ಎಂದು ಗುರುತಿಲಸಾಯಿತು. ಸದರಿ ನಿಪಿ.7ರ ಮೇಲೆ ಇರುವ 2ನೇ ಪ್ರತಿವಾದಿಯ ಹೆಬ್ಬಟ್ಟಿ ಸಹಿನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ.7ಇ ಮತ್ತು 7ಎಫ್ ಎಂದು ಗುರುತಿಸಲಾಯಿತು.

**(ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**

**ಬೆಳಗಾವಿ**